ಅನುಬಂಧ-2

ಪರಿಷ್ಕೃತ ಅಕ್ಷಯ ಯೋಜನೆ

ಹಾಲಿ ಜಾರಿಯಲ್ಲಿರುವ ಅಕ್ಷಯ ಕಾರ್ಯಕ್ರಮದಿಂದ ನಿರೀಕ್ಷಿತ ಮಟ್ಟದ ಪ್ರಯೋಜನ ಲಭಿಸಿಲ್ಲವೆಂದು ಭಾವಿಸಿ ಇದರ ಬದಲಿಗೆ 3 ಘಟಕಾಂಶಗಳುಳ್ಳ ಹಲವಾರು ಸಮಗ್ರ ಚಟುವಟಿಕೆಗಳನ್ನೊಳಗೊಂಡ ಪರಿಷ್ಕೃತ ಕಾರ್ಯಕ್ರಮವನ್ನು ಜಾರಿಗೊಳಿಸಲು ಉದ್ದೇಶಿಸಿದೆ.

ಮಗು ಕೇಂದ್ರಿಕೃತ ಕಾರ್ಯಕ್ರಮಗಳು : ಇದರಡಿಯಲ್ಲಿ ಉಚಿತ ಸಮವಸ್ತ್ರ ವಿತರಿಸುವ 'ವಸ್ತ್ರಧಾರ' ಉಚಿತ ಪಠ್ಯಪುಸ್ತಕವನ್ನೊದಗಿಸುವ 'ಪುಸ್ತಕಾಲಯ' ಹಾಗೂ ಶಕ್ತಿಯುತ ಆಹಾರ ಒದಗಿಸುವ 'ಆಹಾರ' ಕಾರ್ಯಕ್ರಮಗಳನ್ನು ಜಾರಿಗೊಳಿಸಲಿದ್ದು ಇವುಗಳಿಗೆ ಕ್ರಮವಾಗಿ ರೂ. 1030 ಲಕ್ಷ; ರೂ. 700 ಲಕ್ಷ ಹಾಗೂ ರೂ. 3500 ಲಕ್ಷ ಹೀಗೆ ಒಟ್ಟು ರೂ. 5230 ಲಕ್ಷಗಳನ್ನು ಒದಗಿಸಲಾಗಿದೆ.

ಶಾಲೆ ಕೇಂದ್ರೀಕೃತ ಕಾರ್ಯಕ್ರಮಗಳು (ವಿದ್ಯಾವರಣ): ಇದರಡಿಯಲ್ಲಿ ಶಾಲೆ ಆಟದ ಮೈದಾನಗಳ ನಿರ್ಮಾಣ ಶಾಲಾ ಕಟ್ಟಡಗಳ ಲಘು ದುರುಸ್ತಿ ಮತ್ತು 1ನೇ ತರಗತಿಗೆ ಪ್ರತ್ಯೇಕವಾದ ತರಗತಿ ಕೊಠಡಿಗಳನ್ನು ನಿರ್ಮಿಸಲುದ್ದೇಶಿಸಿದ್ದು, ಇವುಗಳಿಗೆ ಕ್ರಮವಾಗಿ ರೂ. 300 ಲಕ್ಷ; ರೂ. 100 ಲಕ್ಷ ಮತ್ತು ರೂ. 1000 ಲಕ್ಷಗಳನ್ನು ಒದಗಿಸಲಾಗಿದೆ.

ಪ್ರಾಥಮಿಕ ಶಾಲಾ ಕಟ್ಟಡಗಳ ದುರಸ್ತಿಗಾಗಿ ಯೋಜನೇತರ ಆಯವ್ಯಯದಡಿಯಲ್ಲಿ ರೂ.210 ಲಕ್ಷಗಳನ್ನು ಸಹಾ ಒದಗಿಸಿದೆ.

ಶಾಲಾ ಸಾಮಾನ್ಯ (ಸ್ಕೂಲ್ ಜನರಲ್) ಕಾರ್ಯಕ್ರಮಗಳು : ಈ ಕಾರ್ಯಕ್ರಮದಡಿಯಲ್ಲಿ ಶಾಲಾ ಮಕ್ಕಳಿಗೆ ಶೈಕ್ಷಣಿಕ ಪ್ರವಾಸ ಏರ್ಪಡಿಸುವ 'ಯಾತ್ರಾ' ಮಕ್ಕಳಿಗೆ ವಾಚನಾಲಯ ಕ್ಲಬ್ ನಿರ್ಮಿಸುವ, ಕಲೆ ಸಂಗೀತ ಮತ್ತು ಕ್ರೀಡಾ ಉಪಕರಣಗಳನ್ನು ಒದಗಿಸುವ 'ಮನೋರಂಜನಾ' ಕಾರ್ಯಕ್ರಮಗಳನ್ನು ಜಾರಿಗೆ ತರಲುದ್ದೇಶಿಸಿದ್ದು, ಈ ಉದ್ದೇಶಗಳಿಗಾಗಿ ಕ್ರಮವಾಗಿ ರೂ. 100 ಲಕ್ಷ; , ಮತ್ತು ರೂ. 200 ಲಕ್ಷಗಳನ್ನು ಒದಗಿಸಲಾಗಿದೆ.

ವಿಷಯ : - ಅಕ್ಷಯ ಯೋಜನೆ ಅಡಿಯಲ್ಲಿ ವೆಚ್ಚ ಮಾಡಿರುವ ಮೊಬಲಗು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 120(393)

ಶ್ರೀ ಶಿವಾನಂದ ಎಚ್.ಕೌಜಲಗಿ(ಬೈಲಹೊಂಗಲ)

ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1991-92, 1992-93 ಹಾಗೂ 93-94ನೇ ಸಾಲುಗಳ ಆಯವ್ಯಯದಲ್ಲಿ ಅಕ್ಷಯ ಯೋಜನೆಗೆ ಎಷ್ಟು ಹಣವನ್ನು ಒದಗಿಸಲಾಗಿತ್ತು.

ಆ) ಈ ಯೋಜನೆಯಡಿಯಲ್ಲಿ ಆ ವರ್ಷಗಳಲ್ಲಿ ಇಲ್ಲಿಯವರೆಗೆ ಎಷ್ಟು ಹಣ ಖರ್ಚಾಗಿರುವುದು?

ಇ) ಬೆಳಗಾವಿ ಜಿಲ್ಲೆಗೆ ಅಕ್ಷಯ ಯೋಜನೆಯಡಿಯಲ್ಲಿ ಸದರೀ ವರ್ಷಗಳಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿತ್ತು ಹಾಗೂ ಅದರಲ್ಲಿ ಎಷ್ಟು ಹಣ ಖರ್ಚಾಗಿರುವುದು (ತಾಲ್ಲೂಕುವಾರು ವಿವರ ಕೊಡುವುದು)

ಈ) ಈ ಅಕ್ಷಯ ಯೋಜನೆಯಡಿಯಲ್ಲಿ ಆಯವ್ಯಯದಲ್ಲಿ ಒದಗಿಸಲಾದ ಹಣವನ್ನು ಖರ್ಚು ಮಾಡದೇ ಬೇರೆ ಕೆಲಸಗಳಿಗೆ ಒದಗಿಸಬೇಕೆಂದು ಸರ್ಕಾರದವರು ನಿರ್ಣಯ ತೆಗೆದುಕೊಂಡ ಸಂಗತಿ ನಿಜವೇ?

ಉ) ಹಾಗಿದ್ದಲ್ಲಿ ಯಾವ ಕೆಲಸಗಳಿಗೆ ಈ ಹಣವನ್ನು ಉಪಯೋಗ ಮಾಡಬೇಕೆಂದು ನಿರ್ಣಯಿಸಲಾಗಿದೆ ಮತ್ತು ಈಗ ಎಷ್ಟು ಹಣವನ್ನು ಯಾವ ಕೆಲಸಗಳಿಗೆ ವರ್ಗಾಯಿಸಲಾಗುವುದು?

ಶ್ರೀಮತಿ. ನಾಗಮ್ಮ ಸಿ.ಕೇಶವಮೂರ್ತಿ

(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

(ರೂ. ಕೋಟಿಗಳಲ್ಲಿ)

ವರ್ಷ	ಆಯವ್ಯಯ
1991-92	80-00
1992-93	80-00
1993-94	70-05
1991-92	ರೂ. 18.07 ಕೋಟಿಗಳು ವೆಚ್ಚವಾಗಿದೆ.

1992-93 – ವೆಚ್ಚವಾಗಿಲ್ಲ – ಆದರೆ 1992-93 ರ ಬಾಬ್ತು ಪ್ರಸಕ್ತ ಸಾಲಿನಲ್ಲಿ ರೂ. 18.70 ಕೋಟಿಗಳನ್ನು ಬಿಡುಗಡೆ ಮಾಡಿದ್ದು ಜಿಲ್ಲಾವಾರು ಹಂಚಿಕೆ ಮಾಡಲಾಗುತ್ತಿದೆ.

1993-94 ವೆಚ್ಚ ಇನ್ನು ಆಗಿಲ್ಲ, ಆದರೆ ಪ್ರಾರಂಭಿಕವಾಗಿ 93-94ನೇ ಸಾಲಿನಲ್ಲಿ ರೂ. 3.00 ಕೋಟಿಗಳನ್ನು ಸಮವಸ್ತ್ರಗಳ ಬಾಬ್ತು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ಹಾಗೂ ರೂ. 3.00 ಕೋಟಿಗಳನ್ನು ಆಹಾರ ಪೂರೈಕೆಗಾಗಿ ಕರ್ನಾಟಕ ಸ್ಟೇಟ್ ಆಗ್ರೋ ಕಾರ್ನ್ ಸಂಸ್ಥೆಗೆ ಬಿಡುಗಡೆ ಮಾಡಿದೆ.

1991-92ರಲ್ಲಿ ಬೆಳಗಾಂ ಜಿಲ್ಲೆಗೆ ರೂ. 1,64,62,496-00 ಗಳನ್ನು ಬಿಡುಗಡೆ ಮಾಡಲಾಗಿದ್ದು, ಇದರ ತಾಲ್ಲೂಕುವಾರು ವಿವರಗಳನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ.

'ಅಕ್ಷಯ' ಕಾರ್ಯಕ್ರಮ ತನ್ನ ಪುನರ್‌ರಚಿಸಲಾದ ಕಾರಣ ಈ ಕಾರ್ಯಕ್ರಮ ಈ ಸಾಲಿನಲ್ಲಿ ತಡವಾಗಿ ಪ್ರಾರಂಭವಾಗಿದೆ, ಆದಕಾರಣ, ಒದಗಿಸಿರುವ ರೂ. 70.05 ಕೋಟಿಗಳು ಖರ್ಚಾಗುವ ಸಂಬಂಧವಿಲ್ಲ ಎಂದು ಅಂದಾಜು ಮಾಡಲಾಗಿದ್ದು, ಇದರಲ್ಲಾಗುವ ನಿರೀಕ್ಷಿತ ಉಳಿತಾಯವನ್ನು ಮಾತ್ರ ಶಿಕ್ಷಣ ವಲಯಗಳಲ್ಲಿಯೇ ಇತರೇ ಅಗತ್ಯ ಬಾಬ್ತುಗಳಿಗೆ ಉಪಯೋಗಿಸಿ ಕೊಳ್ಳಲು ನಿರ್ಧಾರ ಕೈಗೊಳ್ಳಲಾಗಿದೆ.

1993-94ನೇ ಸಾಲಿನಲ್ಲಿ ಹೊಸದಾಗಿ ಪ್ರಾರಂಭಿಸಲಾದ : ಪ್ರಾರಂಭಿಸಲಾಗುವ ಸರ್ಕಾರಿ ಶಿಕ್ಷಣ ಸಂಸ್ಥೆಗಳು : ಸಿಬ್ಬಂದಿ ವೆಚ್ಚ ಹಾಗೂ ಮೂಲಭೂತ ಸೌಲಭ್ಯಗಳ ಪೂರೈಕೆಗಾಗಿ ಮತ್ತು ಅರ್ಹ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಅನುದಾನಕ್ಕೆ ಒಳಪಡಿಸುವ ಸಲುವಾಗಿ ಉಪಯೋಗಿಸಲು ಯೋಜಿಸಿದೆ.

ಅನುಬಂಧ -1

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 393

1991-92ರಲ್ಲಿ ಅಕ್ಷಯ ಯೋಜನೆಯಡಿ ಬೆಳಗಾಂ ಜಿಲ್ಲೆಯಲ್ಲಿ ತಾಲ್ಲೂಕು ವಾರು ಹಂಚಿಕೆ ಮಾಡಿದ ಹಣದ ವಿವರ

ತಾಲ್ಲೂಕು ಹೆಸರು	ಸಹಾಯಕ ಶಿಕ್ಷಣಾಧಿಕಾರಿಗಳಿಗೆ ಬಿಡುಗಡೆ ಮಾಡಿದ ಹಣ	ಮಕ್ಕಳಿಗೆ ಹಂಚಲಾದ ಹಣ	ಉಳಿದ ಹಣ
1	2	3	4
1)ಅಥಣಿ	11,55,472-00	11,55,472-00	-
2)ಬೆಳಗಾವಿ ನಗರ	8,06,568-00	6,87,378-00	1,19,190-00
3)ಬೈಲಹೊಂಗಲ	10,77,250-00	10;55,197-00	22,053-00
4)ಬೆಳಗಾವಿ ತಾ :	7,72,000-00	7,63,981-00	8,019-00
5)ನಿಪ್ಪಾಣಿ	20,80,900-00	9,52,369-00	11,28,531-00
6)ಗೋಕಾಕ್	17,37,400-00	12,48,457-00	4,88,943-00
7)ಹುಕ್ಕೇರಿ	11,76,370-00	10,74,411-00	1,01,959-00
8)ಖಾನಾಪುರ	9,97,174-00	9,97,174-00	-
9)ಚಿಕ್ಕೋಡಿ	10,37,540-00	9,44,681-00	92,859-00
10)ರಾಮದುರ್ಗ	8,87,362-00	8,87,362-00	-
11)ರಾಯಭಾಗ್	8,34,386-00	8,14,937-00	19,449-00
12)ಸವದತ್ತಿ	8,69,950-00	7,19,416-00	1,50,534-00
13)ಜಿಲ್ಲಾ ಉಪನಿರ್ದೇಶಕರ ಖಾತೆಯಲ್ಲಿ ಉಳಿದಿರುವ ಹಣ	30,30,124-00	-	30,30,124-00
ಒಟ್ಟು :	**1,64,62,496-00**	**1,13,00,835-00**	**51,61,661-00**

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : - ಮಾನ್ಯ ಅಧ್ಯಕ್ಷರೆ, ಅಕ್ಷಯ ಕಾರ್ಯಕ್ರಮದ ಬಗ್ಗೆ ನಾನು ಪ್ರಶ್ನೆ ಕೇಳಿದ್ದೆ. ಈಗ ಇದು ಮುಗಿದುಹೋಗಿದೆ. ಯಾವುದೂ ಕೂಡ ಉಳಿದಿಲ್ಲ. ಸರ್ಕಾರದವರು 18 ಕೋಟಿ ರೂ.ಗಳನ್ನು ಕೊಟ್ಟಿದ್ದೇವೆಂದು ಏನು ಹೇಳಿದ್ದಾರೆ ಅದರ ಬಗ್ಗೆ ನಾನು ಕೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : - ಅಕ್ಷಯ ಯೋಜನೆ ಕ್ಷಯರೋಗ ಪೀಡಿತವಾಗಿದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : - ಕಾನೂನು ಪ್ರಕಾರ ಜಾರಿ ಮಾಡುವುದಕ್ಕೆ ತೊಂದರೆಯಾಗಿದೆ; ಸರಿಯಾಗಿ ಜಾರಿ ಮಾಡುವುದಕ್ಕೆ ಆಗಿಲ್ಲವೆಂದು ಅವರೇ ಉತ್ತರವನ್ನು

ಕೊಟ್ಟಿದ್ದಾರೆ. 1992-93ರ ಸಾಲಿನಲ್ಲಿ ಹಣ ಬಿಡುಗಡೆ ಮಾಡುತ್ತೇವೆಂದು ಹೇಳಿದ್ದಾರೆ. ಯಾವಾಗ ಮಾಡುತ್ತಾರೆ? ಇವರು ಏನು ಪದ್ಧತಿಯನ್ನು ಅನುಸರಿಸಿದ್ದಾರೆ? ಇವರು ಕೊಟ್ಟಿದ್ದನ್ನು ಅಲ್ಲಿನ ಉಪಾಧ್ಯಾಯರೇ ತಿಂದು ಹಾಕುತ್ತಿದ್ದಾರೋ ಅಥವಾ ಅದನ್ನು ಮಕ್ಕಳಿಗೆ ಮುಟ್ಟಿಸುತ್ತಿದ್ದಾರೋ? ಅಥವಾ ಈ ಯೋಜನೆಯನ್ನು ಮಾನ್ಯ ಬಂಗಾರಪ್ಪನವರು ಜಾರಿ ಮಾಡಿರುವುದರಿಂದ ಇದನ್ನು ತೆಗೆದುಹಾಕಬೇಕೆಂದು ಈ ಸರ್ಕಾರದವರು ಏನಾದರೂ ವಿಚಾರ ಮಾಡಿದ್ದಾರೋ? ಇದು ನಮಗೆ ಏನೇನೂ ಅರ್ಥವಾಗುತ್ತಿಲ್ಲ. ಮಾನ್ಯ ಮಂತ್ರಿಗಳು ಇದರ ಬಗ್ಗೆ ಖಚಿತವಾದ ಉತ್ತರವನ್ನು ಕೊಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ : – ಮಾನ್ಯ ಅಧ್ಯಕ್ಷರೇ, ಈಗ ಅಕ್ಷಯ ಯೋಜನೆಯ ಅಡಿಯಲ್ಲಿ 1991-92ರ ಬಡ್ಜೆಟ್‌ನಲ್ಲಿ 80 ಕೋಟಿ ರೂಪಾಯಿಗಳನ್ನು ಇಟ್ಟಿತ್ತು. ಅದರಲ್ಲಿ 20 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಖರ್ಚುಮಾಡಲಾಗಿದೆ. ತದನಂತರ 1992-93ರಲ್ಲಿ ಮತ್ತೆ 90 ಕೋಟಿ ರೂಪಾಯಿಗಳನ್ನು ಈ ಒಂದು ಕಾರ್ಯಕ್ರಮಕ್ಕೆ ಪ್ರೊವೈಡ್ ಮಾಡಿತ್ತು. ಅದರಲ್ಲಿ 1992-93ರಲ್ಲಿ14 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಅದನ್ನು ಸಹ ಖರ್ಚು ಮಾಡಲಾಗಿದೆ, ಈ ವರ್ಷ1993-94ರ ಬಡ್ಜೆಟ್‌ನಲ್ಲಿ 70 ಕೋಟಿ ರೂಪಾಯಿಗಳನ್ನು ಈ ಒಂದು ಕಾರ್ಯಕ್ರಮಕ್ಕೆ ನಾವು ಇಟ್ಟಿದ್ದೇವೆ. ಇದರಲ್ಲಿ ಈಗಾಗಲೇ 6 ಕೋಟಿ ರೂಪಾಯಿಗಳನ್ನು ನಾವು ಬಿಡುಗಡೆ ಮಾಡಿ, ವಸ್ತ್ರಧಾರ ಅಂದರೆ ಮಕ್ಕಳಿಗೆ ಬಟ್ಟೆಗಳನ್ನು ಕೊಡುವಂಥ ಒಂದು ಕಾರ್ಯಕ್ರಮವನ್ನು ಮತ್ತು ಪೌಷ್ಟಿಕ ಆಹಾರವನ್ನು ನಾವು ಕೊಡುವಂಥ ಕಾರ್ಯಕ್ರಮಕ್ಕೆ 3 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಈ ಕಾರ್ಯಕ್ರಮವನ್ನು ನಿಲ್ಲಿಸುವಂತಹ ಯೋಜನೆ ಸರ್ಕಾರದ ಮುಂದೆ ಇಲ್ಲ, ನಿಲ್ಲಿಸುವುದೂ ಇಲ್ಲ. ಮತ್ತೆ ಈ ಕಾರ್ಯಕ್ರಮವನ್ನು ಇನ್ನೂ ಸರಿಯಾದ ರೀತಿಯಲ್ಲಿ ಮಾರ್ಪಾಡು ಮಾಡಿ ಇದರ ಬಗ್ಗೆ ತಮಗೆ ಗೊತ್ತಿರುವ ಹಾಗೆ ಹಿಂದಿನ ವರ್ಷ ಆಟೆಂಡೆನ್ಸ್ ಮೇಲೆ ದಿನಕ್ಕೆ ಒಂದು ರೂಪಾಯಿಯಂತೆ ಹಣವನ್ನು ಮಗುವಿಗೆ ಕೊಡುವಂತಹ ವ್ಯವಸ್ಥೆಯನ್ನು ಮಾಡಲಾಗಿತ್ತು. ಆದರೆ ಇದರಿಂದ ನಮಗೆ ತಿಳಿದು ಬಂದ ವರದಿಯ ಪ್ರಕಾರ ಯಾರಿಗೊಸ್ಕರ ಈ ಕಾರ್ಯಕ್ರಮ ರೂಪಿತವಾಗಿತ್ತೋ ಆ ಮಕ್ಕಳಿಗೆ ಈ ಹಣ ಎಷ್ಟೋ ಸಲ ಸಿಗುತ್ತಿಲ್ಲ ಎಂಬುದು ನಮ್ಮ ಗಮನಕ್ಕೆ ಬಂದು ಮಕ್ಕಳಿಗೆ ಈ ಕಾರ್ಯಕ್ರಮವನ್ನು ಬೇರೆ ರೂಪದಲ್ಲಿ ರೂಪಿಸಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಈ ಒಂದು ಕಾರ್ಯಕ್ರಮದ ಅಡಿಯಲ್ಲಿ ಮಕ್ಕಳಿಗೆ ಶಿಕ್ಷಣ ಆಕರ್ಷಣೀಯವಾಗಿರಬೇಕು ಎನ್ನುವ ದೃಷ್ಟಿಯಿಂದ ಕೆಲವಾರು ಎಕ್ಸ್‌ಟ್ರಾ ಕರಿಕ್ಯುಲರ್ ಆಕ್ಟಿವಿಟೀಸ್‌ನ್ನೂ ಶಾಲೆಗಳಲ್ಲಿ ನಡೆಸುವಂತಹ ದೃಷ್ಟಿಯಿಂದ ಮಕ್ಕಳಿಗೆ ವರ್ಷಕ್ಕೆ ಒಂದು ಸಲವಾದರೂ ಶೈಕ್ಷಣಿಕ ಪ್ರವಾಸ ಕರೆದುಕೊಂಡು ಹೋಗುವುದಕ್ಕೆ ಒಂದು ಕಾರ್ಯಕ್ರಮವನ್ನು ರೂಪಿಸಿದ್ದೇವೆ. ಇದಲ್ಲದೆ ಶಾಲೆಗಳಲ್ಲಿ ಆಟದ ಮೈದಾನ ಇದೆ, ಮತ್ತು ಶಾಲೆಗಳಿಗೆ ಆಟದ ಸಾಮಾನಿನ ಕಿಟ್ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಮ್ಯೂಸಿಕಲ್ ಇನ್ಸ್‌ಟ್ರುಮೆಂಟ್ಸ್ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ನಮ್ಮ ಹೆಣ್ಣು ಮಕ್ಕಳ ಪೈಕಿ ಕರಕುಶಲದಲ್ಲಿ ಆಸಕ್ತಿ ಇರುವಂಥವರು ಬಹಳ ಜನರು ಇದ್ದಾರೆ. ಅವರಿಗೆ ಪ್ರೋತ್ಸಾಹ ಕೊಡಬೇಕೆಂಬ ದೃಷ್ಟಿಯಿಂದ ಹ್ಯಾಂಡಿಕ್ರಾಫ್ಟ್‌ಗೆ ಸವಲತ್ತುಗಳನ್ನು ನೀಡಲು ಸಹ ಈ ವರ್ಷ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಶಿಕ್ಷಣ

ಆಕರ್ಷಣೀಯವಾಗಿರಬೇಕು, ಮಕ್ಕಳನ್ನು ಆಕರ್ಷಿಸುವಂತೆ ಇರಬೇಕು ಎನ್ನುವ ದೃಷ್ಟಿಯಿಂದ ಈ ಎಲ್ಲಾ ಎಕ್ಸ್‌ಟ್ರಾ ಕರಿಕ್ಯುಲರ್ ಆಕ್ಟಿವಿಟೀಸ್‌ಗೂ ಸಹ ಈ ವರ್ಷ ನಾವು ಕಾರ್ಯಕ್ರಮವನ್ನು ರೂಪಿಸಿದ್ದೇವೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : – ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಮಕ್ಕಳು ಓದುವ ಸಂಖ್ಯೆಯನ್ನು ಹೆಚ್ಚಿಸಲು ಅವರಿಗೆ ಆಟದ ಸಲುವಾಗಿ, ವಸ್ತ್ರದ ಸಲುವಾಗಿ, ಆಹಾರದ ಸಲುವಾಗಿ ಬಹಳ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆಂದು ಹೇಳಿದರು. ನಮ್ಮ ಜಿಲ್ಲೆಯಲ್ಲಿ ಮತ್ತು ಕೆಲವು ಕಡೆನೋಡಿದ್ದೇನೆ; ಯಾವ ಆಟದ ಕಾರ್ಯಕ್ರಮವೂ ಇಲ್ಲ, ಆಟ ಆಡುವುದಕ್ಕೆ ಜಾಗ ಇಲ್ಲ, ಶಾಲೆಯ ಮುಂದೆ ಅವರ ಗತಿಯನ್ನು ನೋಡಿದರೆ ದೇವರೇ ಗತಿ; ಅಲ್ಲಿ ಕತ್ತೆಗಳು ಓಡಾಡುತಿರುತ್ತವೆ, ಇನ್ನು ಮಕ್ಕಳು ಎಲ್ಲಿ ಆಡಬೇಕು? ಇವರ ಕಾರ್ಯಕ್ರಮಗಳನ್ನು ನೋಡಿದರೆ, ಕಾರ್ಯಕ್ರಮಗಳು ಕಾಗದದ ಮೇಲೆ ಇದೆಯೋ ಅಥವಾ ಕಾರ್ಯರೂಪದಲ್ಲಿ ಇದೆಯೋ ಎನ್ನುವಂತಹ ಸಂಶಯ ಉದ್ಭವವಾಗುತ್ತದೆ. ಕಾಗದದಲ್ಲಿ ಬರೆದುಕೊಂಡು ಹಾಗೆ ಹೀಗೆ ಮಾಡುತ್ತೇವೆಂದು ದೊಡ್ಡದಾಗಿ ಹೇಳಿಪೇಪರ್‌ನಲ್ಲಿ ಬಂದರೆ ಮುಗಿದುಹೊಯಿತು. ಮಕ್ಕಳಿಗೆ ಏನಾದರೂ ಆದರಿಂದ ಪ್ರಯೋಜನವಾಗಿದೆಯೆ? ಎಷ್ಟು ಶಾಲೆಗಳು ಉದ್ಧಾರವಾಗಿವೆ? ಎಷ್ಟು ಮಕ್ಕಳಿಗೆ ಇದರಿಂದ ಉಪಯೋಗವಾಗಿದೆ? ಎಷ್ಟು ಮಕ್ಕಳಿಗೆ ಇದರಿಂದ ಒಳ್ಳೆಯದಾಗಿದೆ ಎಂದು ಖಚಿತವಾಗಿ ನಂಬರ್ ಹೇಳಿಲ್ಲ. 1992-93ರಲ್ಲಿ ಜಿಲ್ಲಾವಾರು ಬಿಡುಗಡೆಯಾದ ಹಣವನ್ನು ಕೇಳಿದ್ದೇನೆ. ಆದರಲ್ಲಿ ಒಂದು ವರ್ಷದ್ದು ಮಾತ್ರ ಕೊಟ್ಟಿದ್ದಾರೆ. ಇನ್ನೊಂದು ವರ್ಷದ್ದು ಜಿಲ್ಲಾವಾರು ಬಿಡುಗಡೆಯಾದ್ದು ಕೊಟ್ಟಿಲ್ಲ. ಅಂದರೆ ಇವರು ಬಿಡುಗಡೆ ಮಾಡಿಲ್ಲವೆಂದು ಅರ್ಥವಾಗುತ್ತದೆ. ಆದುದರಿಂದ ಎಷ್ಟು ಶಾಲೆಗಳಿಗೆ ತಾವು ಕೊಟ್ಟಿದ್ದೀರಿ? ಇದರಿಂದ ಎಷ್ಟು ಮಕ್ಕಳಿಗೆ ಅನುಕೂಲವಾಗಿದೆ? ಎಷ್ಟು ಸಂಖ್ಯೆ ಹೆಚ್ಚಾಗಿದೆ ಎನ್ನುವುದನ್ನು ತಾವು ಹೇಳಿ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ : – ಈಗ 1992-93ರಲ್ಲಿ ನಾನು ಹೇಳಿದ ಹಾಗೆ 14 ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡಿತ್ತು. ಆದರೆ ಬಿಡುಗಡೆ ಮಾಡಿದ ಹಣ ನಮ್ಮ ಇಲಾಖೆಗೆ ದೊರೆತಿದ್ದು ಸ್ವಲ್ಪ ತಡವಾಯಿತು. ಆದುದರಿಂದ ಆ ಒಂದು ವರ್ಷದಲ್ಲಿ ನಾವು ಈ ಕಾರ್ಯಕ್ರಮಗಳನ್ನು ಹೆಚ್ಚಿನ ರೀತಿಯಲ್ಲಿ ಮುಂದುವರೆಸುವುದಕ್ಕೆ ಆಗಲಿಲ್ಲ. ಏಪ್ರಿಲ್, ಮೇ ತಿಂಗಳಿನಲ್ಲಿ ನಮ್ಮ ಡಿಪಾರ್ಟ್‌ಮೆಂಟ್‌ಗೆ ಈ ಹಣ ದೊರೆಯುವುದಕ್ಕೆ ಸಾಧ್ಯವಾಯಿತು. ಈ ಒಂದು ಯೋಜನೆಯನ್ನು ನಾವು ವಿಮರ್ಶಿಸಿ, ಇದನ್ನು ಪುನರ್ ರಚನೆ ಮಾಡಿರುವುದರಿಂದ, ಈ ಕಾರ್ಯಕ್ರಮ ಸ್ವಲ್ಪ ತಡವಾಗಿ ಎಂದರೆ ನಾವು ಈ ವರ್ಷದಲ್ಲಿ ಇದನ್ನು ಪ್ರಾರಂಭ ಮಾಡುತ್ತಿದ್ದೇವೆ. ಈಗಾಗಲೇ ಈ ಕಾರ್ಯಕ್ರಮದ ಬಗ್ಗೆ ನಾವು ಬರೆದಿದ್ದೇವೆ. ಹಣವನ್ನು ಸಹ ಇನ್ನೊಂದು ವಾರದಲ್ಲಿ ನಾವು ಬಿಡುಗಡೆ ಮಾಡಿ ಹೆಚ್ಚು ಶಾಲೆಗಳಲ್ಲಿ ಈ ಎಕ್ಸ್‌ಟ್ರಾ ಕರಿಕ್ಯುಲರ್ ಆಕ್ಟಿವಿಟೀಸ್‌ನ್ನು ಸಹ ಪ್ರಾರಂಭ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : – ಎಷ್ಟು ಶಾಲೆಗಳಿಗೆ ಕೊಟ್ಟಿದ್ದೀರಿ? ಎಷ್ಟು ಹುಡುಗರಿಗೆ ಎಂದು ಕೇಳಿದರೆ ಅದನ್ನು ಹೇಳುತ್ತಿಲ್ಲ; ಎಷ್ಟು ಶಾಲೆಗಳಿಗೆ ಅನುಕೂಲವಾಗಿದೆ ಎಂಬುದನ್ನು ಹೇಳಿ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ : – ಎಷ್ಟು ಮಕ್ಕಳು ಎನ್ನುವ ಪ್ರಶ್ನೆಗೆ ನನ್ನ ಹತ್ತಿರ ಈಗ ಅಂಕಿ ಅಂಶ ಇಲ್ಲ. ಅದನ್ನು ನಾನು ನಿಮಗೆ ತರಿಸಿ ಕಳುಹಿಸಿಕೊಡುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : – ಎಷ್ಟು ಶಾಲೆಗಳಿಗೆ ಅನುಕೂಲವಾಗಿದೆ ಎಂಬುದನ್ನು ಹೇಳಬಹುದಲ್ಲ.

ಶ್ರೀಮತಿ ನಾಗಮ್ಮ ಸಿ.ಕೇಶವಮೂರ್ತಿ : – ಈಗ ನನ್ನ ಹತ್ತಿರ ಅದರ ಅಂಕಿ ಅಂಶಗಳು ಇಲ್ಲ. ಅದೆಲ್ಲವನ್ನೂ ಸಹ ನಾನು 2-3 ದಿವಸದಲ್ಲಿ ತಮಗೆ ಒದಗಿಸಿಕೊಡುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : – ಈಗ ಸರ್ಕಾರ ಇಲ್ಲ ; ಅದಕ್ಕೇ ಹೀಗೆ ಆಗಿರುವುದು.

ಶ್ರೀ ಶಿವಾನಂದ ಎಚ್. ಕೌಜಲಗಿ : – ಸನ್ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ನಾನು ಕೇಳಿದಂತಹ ಪ್ರಶ್ನೆ ಏನೆಂದರೆ 1991-92, 1992-93, ಹಾಗೂ 1993-94 ನೇ ಸಾಲುಗಳಲ್ಲಿ ಆಯವ್ಯಯದಲ್ಲಿ ಅಕ್ಷಯ ಯೋಜನೆಗೆ ಎಷ್ಟು ಹಣವನ್ನು ಒದಗಿಸಲಾಗಿತ್ತು ಎಂದು. ಅದಕ್ಕೆ ಅವರು ಉತ್ತರದಲ್ಲಿ 1991-92ಕ್ಕೆ 80 ಕೋಟಿ ರೂಪಾಯಿಗಳು, 1992-93ಕ್ಕೆ 80 ಕೋಟಿ ರೂಪಾಯಿಗಳು, 1993-94ಕ್ಕೆ 70 ಕೋಟಿ ರೂಪಾಯಿಗಳು ಎಂದು ತೋರಿಸಿದ್ದಾರೆ. ಆದರೆ ಖರ್ಚು ಆಗಿದ್ದು ಎಷ್ಟು ಎಂದರೆ 1991-92ಕ್ಕೆ 18 ಕೋಟಿ ರೂಪಾಯಿಗಳು, 1992-93ಕ್ಕೆ ಏನೂ ಖರ್ಚಾಗಿಲ್ಲ ; ಆದರೆ 1992-93ನೇ ವರ್ಷದ ಖರ್ಚುಗಳಲ್ಲಿ 18 ಕೋಟಿ ರೂಪಾಯಿಗಳನ್ನು ಬೇರೆಯದಕ್ಕೆ ನಾವು ಡೈವರ್ಟ್ ಮಾಡಿದ್ದೇವೆ ಎಂದು ವಿವರಣೆ ಕೊಟ್ಟಿದ್ದಾರೆ. ಮತ್ತು 1993-94ಕ್ಕೆ ಏನೂ ವೆಚ್ಚವಾಗಿಲ್ಲ ಎಂದು ಹೇಳುತ್ತಾರೆ. 1993-94ನೇ ವರ್ಷ ಪ್ರಾರಂಭವಾಗಿ ಇಂದಿಗೆ 5 ತಿಂಗಳಾಯಿತು. 5 ತಿಂಗಳಾದರೂ ಸಹ, ಆಯವ್ಯಯದಲ್ಲಿ ಈ ವರ್ಷಕ್ಕೆ 70 ಕೋಟಿ ರೂಪಾಯಿ ಒದಿಗಿಸಿದರೂ ಸಹ ಇವತ್ತಿನ ತನಕ ಒಂದು ಪೈಸೆ ಕೂಡ ಖರ್ಚಾಗಿಲ್ಲ ಎಂದು ತಮ್ಮ ಉತ್ತರದಲ್ಲಿ ತಿಳಿದು ಬರುತ್ತದೆ. ಇನ್ನು 1991-92ರಲ್ಲಿ ಕೇವಲ 18 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಇನ್ನುಳಿದ ಹಣ ಏಕೆ ಖರ್ಚು ಮಾಡಲಿಲ್ಲ? You are cheating the public. Sir, they say that they have provided 80 crores in the budget. They are now saying that they have not spent a single pie. Is it not a cheating to the public? ಆರ್ಥಿಕ ಇಲಾಖೆಯವರು, ಎಜುಕೇಷನ್ ಡಿಪಾರ್ಟ್‌ಮೆಂಟ್‌ಗೆ ಹಣವನ್ನು ಬಿಡುಗಡೆ ಮಾಡಿದರೋ ಅಥವಾ ಇಲ್ಲವೋ? ಬಿಡುಗಡೆ ಮಾಡದೇ ಇದ್ದರೆ ಏಕೆ ಬಿಡುಗಡೆ ಮಾಡಲಿಲ್ಲ? ಬಿಡುಗಡೆ ಮಾಡದೇ ಇದ್ದ ಕಾರಣ ಎಜುಕೇಷನ್ ಡಿಪಾರ್ಟ್‌ಮೆಂಟ್‌ನವರು ಯಾವ ಕ್ರಮ ಕೈಗೊಂಡರು ಮತ್ತು 1992-93ನೇ ಸಾಲಿನಲ್ಲಿ ಈ ಹಣವನ್ನು ಲ್ಯಾಪ್ಸ್ ಮಾಡಿದ್ದಾರೆ, ಈ ರೀತಿ ಲ್ಯಾಪ್ಸ್ ಮಾಡುವುದಕ್ಕೆ ಯಾರು ಜವಾಬ್ದಾರರು? ಇದಕ್ಕೆ ಯಾರು ಜವಾಬ್ದಾರಿ ವಹಿಸುತ್ತಾರೆ ಎಂದು ಮೊದಲು ಇಷ್ಟಕ್ಕೆ ಉತ್ತರ ಹೇಳಿ ; ನಂತರ ಮತ್ತೆ ಕೇಳುತ್ತೇನೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ : – ಈ ಪ್ರಶ್ನೆಗೆ ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ ಎಂದು ನನಗೆ ಅನಿಸುತ್ತದೆ. ಈಗ ಇರೋ ವಿಷಯವನ್ನು ನಾನು ತಮ್ಮ ಮುಂದೆ ಇಟ್ಟಿದ್ದೀನಿ. 1991-92ರ ಬಜೆಟ್‌ನಲ್ಲಿ ನಮಗೆ 80 ಕೋಟಿ ರೂಪಾಯಿ ಇದ್ದರೂ ಸಹ ನಮ್ಮ ಡಿಪಾರ್ಟ್‌ಮೆಂಟ್‌ಗೆ ಬಿಡುಗಡೆ ಮಾಡಿದ್ದು ಇಷ್ಟೇ ಹಣ ಎಂದು ನಾನು ಈಗಾಗಲೇ ಹೇಳಿಬಿಟ್ಟಿದ್ದೇನೆ. 1992-93ರಲ್ಲಿ ವರ್ಷದ ಕೊನೆಯಲ್ಲಿ ಹಣವನ್ನು ಬಿಡುಗಡೆ ಮಾಡಿದ್ದರಿಂದ ನಮ್ಮ ಡಿಪಾರ್ಟ್‌ಮೆಂಟ್‌ಗೆ ಹಣ ಬರುವುದು ತಡವಾಗಿದ್ದರಿಂದ ಈ ವರ್ಷದಲ್ಲಿ ಹೆಚ್ಚಿಗೆ ಹಣವನ್ನು ಖರ್ಚು ಮಾಡಲಿಕ್ಕೆ ಆಗಲಿಲ್ಲ. ಈ ವರ್ಷ ಎಂದರೆ 1993-94ರಲ್ಲಿ ನಾವು ಈಗಾಗಲೇ 6 ಕೋಟಿ

ರೂಪಾಯಿಗಳನ್ನು ಕೊಟ್ಟಿದ್ದು, ಅದರಲ್ಲಿ 3 ಕೋಟಿ ರೂಪಾಯಿಗಳನ್ನು ಸಮವಸ್ತ್ರಗಳ ಬಾಬ್ತಿಗಾಗಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮಕ್ಕೂ ಹಾಗೂ 6 ಕೋಟಿ ರೂಪಾಯಿಗಳನ್ನು ಆಹಾರ ಪೂರೈಕೆಗಾಗಿ ಕರ್ನಾಟಕ ಸ್ಟೇಟ್ ಆಗ್ರೋ ಕಾರ್ನ್ ಸಂಸ್ಥೆಗೂ ಬಿಡುಗಡೆ ಮಾಡಿದ್ದೇವೆ. ನಾನು ಮೊದಲೇ ಹೇಳಿದ ಹಾಗೆ ಈ ಒಂದು ಕಾರ್ಯಕ್ರಮವನ್ನು ಪುನರ್ ರಚಿಸಿ ಹೊಸ ರೂಪುರೇಖೆಯನ್ನು ಕೊಡಬೇಕು ಎನ್ನುವ ದೃಷ್ಟಿಯಿಂದ ಸ್ವಲ್ಪ ತಡವಾಗಿದೆ. ಇನ್ನೊಂದು ವಾರದಲ್ಲಿ ಈ ಹೊಸ ಕಾರ್ಯಕ್ರಮಕ್ಕೆ ಎಷ್ಟೆಷ್ಟು ಹಣ ಬೇಕು ಅದನ್ನು ಪ್ರತಿಜಿಲ್ಲೆಗೂ ಸಹ ಬಿಡುಗಡೆ ಮಾಡಬೇಕಾಗುತ್ತದೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : – ಸನ್ಮಾನ್ಯ ಅಧ್ಯಕ್ಷರೇ, ಇವರು ಹೊಸ ಕಾರ್ಯಕ್ರಮದ ಬಗ್ಗೆ ಹೇಳಿದರು. ಅದು ಸಮವಸ್ತ್ರ ಮತ್ತು ಪುಸ್ತಕ ಕೊಡುವ ಬಗ್ಗೆ. ಅನಂತರ ಶಾಲೆ ರಿಪೇರಿ ಸಲುವಾಗಿ ನಾವು ಈ ಹಣ ಉಪಯೋಗ ಮಾಡಿಕೊಳ್ಳುತ್ತೇವೆ ಎಂದು ಹೇಳಿದರು. ಆಟದ ಬಯಲು ಮತ್ತು ಆಹಾರ ಕೊಡುವ ಬಗ್ಗೆಯೂ ಸಹ ಹೇಳಿದರು. ಇದೆಲ್ಲಾ ಕಾರ್ಯಕ್ರಮಗಳು ಮೊದಲು ಸಹ ಇದ್ದವು. ಅನಂತರ ಆಟದ ಬಯಲಿನ ಬಗ್ಗೆ.....

ಅಧ್ಯಕ್ಷರು : – ಏನು ಆಗಬೇಕು ಎಂದು ತಾವು ಸ್ವಲ್ಪದರಲ್ಲೇ ಕೇಳಿ.

ಶ್ರೀ ಎಸ್. ಹೆಚ್.ಕೌಜಲಗಿ : –ಕೋಟಿಗಟ್ಟಲೆ ರೂಪಾಯಿ ನಷ್ಟವಾಗಿರುವಾಗ ನನಗೆ ಹೇಳೋದಕ್ಕೆ ಅವಕಾಶ ಕೊಡುವುದಿಲ್ಲ ಅಂದರೆ ಹೇಗೆ? What steps the Government has taken to release that amount ? Who is responsible for not spending that amount? It is a shame on the part of the Education Department.

500 ರೂಪಾಯಿ ರೊಕ್ಕ ಖರ್ಚು ಮಾಡಿದೆ ಎಂದು ಹೇಳಲಿಕ್ಕೆ ಆಗುತ್ತದೆ, ಆದರೆ ಅದನ್ನು ಯಾರು ಬಿಡುಗಡೆ ಮಾಡಬೇಕು?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : – ಪಾಪ ಹೆಣ್ಣು ಮಗಳ ಮೇಲೆ ಇಷ್ಟೊಂದು ಗಧಾ ಪ್ರಹಾರ ಬೇಡ ; ಸ್ವಲ್ಪ ತಾಳ್ಮೆಯಿಂದ ಕೇಳಿ.

(ಗೊಂದಲ)

ಶ್ರೀ ಎಸ್. ಹೆಚ್.ಕೌಜಲಗಿ : – ಬಂಗಾರಪ್ಪನವರ ಉದ್ದೇಶ ಶಾಲೆಗೆ ಬರುವ ವಿದ್ಯಾರ್ಥಿಗಳಲ್ಲಿ ಆಕರ್ಷಣೆ ಮೂಡಿಸುವ ಸಲುವಾಗಿ ಪ್ರತಿಯೊಬ್ಬ ವಿದ್ಯಾರ್ಥಿಗೆ ಒಂದೊಂದು ರೂಪಾಯಿ ಕೊಡಬೇಕೆಂಬ ಉದ್ದೇಶವಿತ್ತು. ಆ ಉದ್ದೇಶಕ್ಕಾಗಿ ಇಟ್ಟ ಹಣ, ಹಾಗೆ ಇಟ್ಟಂತಹ ಹಣವನ್ನು ಆ ಕೆಲಸಕ್ಕಾಗಿ ಏಕೆ ಖರ್ಚು ಮಾಡಲಿಲ್ಲ ? ಇದಕ್ಕೆ ಜವಾಬ್ದಾರರು ಯಾರು? 1992-93ರ ಹಣವನ್ನು ಈಗ 1993ಕ್ಕೆ ಖರ್ಚು ಮಾಡಿ ಇನ್ನೂ 70 ಕೋಟಿ ಖರ್ಚು ಮಾಡವುದಕ್ಕೆ ಸಾಧ್ಯ ಇದೆಯೇ? ಬಡ್ಜೆಟ್ಟಿನಲ್ಲಿ ಯಾವ ಉದ್ದೇಶಕ್ಕಾಗಿ ಹಣ ತೆಗೆದುಕೊಂಡಿದ್ದೀರಿ ಅದೇ ಉದ್ದೇಶಕ್ಕೆ ಖರ್ಚು ಮಾಡಬೇಕಾಗುತ್ತದೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ : – 1991-92 ರಲ್ಲೇ ಕಡಿಮೆ ಖರ್ಚಾಗಿದೆ. ತಮಗೆ ಗೊತ್ತಿದೆ. 80 ಕೋಟಿಯಲ್ಲಿ ಕೇವಲ 18-20 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೀವಿ. 1991-92 ರಲ್ಲಿನ ಅಂಕಿ ಅಂಶಗಳನ್ನು ತಮ್ಮ ಮುಂದಿಟ್ಟಿದ್ದೇನೆ.

(ಗೊಂದಲ)

ಶ್ರೀ ಎಸ್.ಹೆಚ್.ಕೌಜಲಗಿ :- ಖರ್ಚು ಮಾಡಬೇಕಾಗಿದ್ದರೂ ಏಕೆ ಮಾಡಲಿಲ್ಲ? ಹಾಗಿದ್ದರೆ, ಸರ್ಕಾರದಲ್ಲಿ ದುಡ್ಡು ಇಲ್ಲ ಅಂತ ಹೇಳಿ; ನಿಮ್ಮ ಸರ್ಕಾರದಲ್ಲಿ ರೊಕ್ಕ ಇಲ್ಲ ಸರ್ಕಾರ ದಿವಾಳಿಯಾಗಿದೆ ಅಂತ ಹೇಳಿ.

ಶ್ರೀಮತಿ ನಾಗಮ್ಮ ಸಿ.ಕೇಶವಮೂರ್ತಿ :- ಬಜೆಟ್‌ನಲ್ಲಿ ಎಷ್ಟೇ ಪ್ರಾವಿಷನ್ ಮಾಡಿದ್ದರೂ ನಮ್ಮ ಇಲಾಖೆಗೆ ಎಷ್ಟು ಬಿಡುಗಡೆ ಮಾಡುತ್ತಾರೆ, ಅಷ್ಟು ಖರ್ಚು ಮಾಡುತ್ತೇವೆ. 1991-92ರಲ್ಲಿ 70 ಕೋಟಿ ಇತ್ತು. ಆದರಲ್ಲಿ 20 ಕೋಟಿ ರೂಪಾಯಿ ಅವರು ರಿಲೀಸ್ ಮಾಡಿದ್ದಾರೆ. ಅದನ್ನು ಪೂರ್ಣವಾಗಿ ಖರ್ಚು ಮಾಡಿದ್ದೇವೆ. 1992-93ರಲ್ಲಿ 70 ಕೋಟಿ ಇತ್ತು; ಆದರಲ್ಲಿ ಸುಮಾರು 14 ಕೋಟಿ, ಲೇಟಾಗಿ ರಿಲೀಸ್ ಮಾಡಿದ್ದರಿಂದ ಆ ಹಣ ಆ ವರ್ಷದಲ್ಲಿ ಖರ್ಚು ಮಾಡಲು ಸಾಧ್ಯವಾಗಲಿಲ್ಲ; ಈ ವರ್ಷ ಅದನ್ನು ಸೇರಿಸಿಕೊಂಡು ಖರ್ಚು ಮಾಡುತ್ತೇವೆ. ಈ ವರ್ಷ ಈಗಾಗಲೇ ಆರು ಕೋಟಿ ರೂಪಾಯಿಗಳನ್ನು ನಾವು ಎರಡು ಸಂಸ್ಥೆಗಳಿಗೆ ಕೊಟ್ಟಿದ್ದೇವೆ. ಇನ್ನು ಒಂದು ವಾರದಲ್ಲಿ ಈ ಪುನರ್ ರೂಪಿಸಲಾದ ಅಕ್ಷಯ ಕಾರ್ಯಕ್ರಮಕ್ಕೆ ನಾವು ಪೂರ್ಣ ಹಣ ಬಿಡುಗಡೆ ಮಾಡುತ್ತೇವೆಂದು ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಅಧ್ಯಕ್ಷರೇ, ಈ ಸರ್ಕಾರ ಅಧಿಕಾರಕ್ಕೆ ಬಂದ ಮೂರುವರೆ ವರ್ಷಗಳಲ್ಲಿ ಕಾರ್ಯಕ್ರಮದಿಂದ ಸಾಕಷ್ಟು ಪ್ರಚಾರ ಪಡೆದುಕೊಂಡಿರುವಂತಹ ಸರ್ಕಾರವಿದು. ಈಗ ಶ್ರೀಮತಿ ನಾಗಮ್ಮ ಕೇಶವಮೂರ್ತಿ ಅವರನ್ನು ಪೇಚಿಗೆ ಸಿಕ್ಕಿ ಹಾಕಿಸಬೇಕು ಎನ್ನುವ ಉದ್ದೇಶ ನಮಗಿಲ್ಲ. ಆದರೆ ರಾಜ್ಯದ ಜನತೆಗೆ ಈ ಪ್ರಶ್ನೋತ್ತರ ಅವಧಿಯ ಬಗ್ಗೆ ಗೊತ್ತಾಗಬೇಕಾಗುತ್ತದೆ ಈ ಅಕ್ಷಯ ಕಾರ್ಯಕ್ರಮಕ್ಕೆ ಅಂತ ಹೇಳಿ 1991-92ನೇ ಇಸವಿಯಲ್ಲಿ 80 ಕೋಟಿ ರೂಪಾಯಿಗಳಲ್ಲಿ ಇವರು 20 ಕೋಟಿ ರೂ.ಗಳನ್ನು ಖರ್ಚು ಮಾಡಲು ಆಗಲಿಲ್ಲ. ಮುಖ್ಯಮಂತ್ರಿಗಳು ಧೈರ್ಯವಾಗಿ ಈ ವರ್ಷದಲ್ಲೂ ನಮ್ಮ ಹತ್ತಿರ ದುಡ್ಡು ಇಲ್ಲ ಅಂತ ಹೇಳಬಹುದಾಗಿತ್ತು. ಈ ಕಾರ್ಯಕ್ರಮವನ್ನು ನಿಲ್ಲಿಸಿದ್ದೇವೆ ಅಂತ ಹೇಳಬಹುದಾಗಿತ್ತು ಆರು ಕೋಟಿ ರೂಪಾಯಿಗಳನ್ನು ಇದುವರೆಗೆ ಬಿಡುಗಡೆ ಮಾಡಿದ್ದೇವೆ ಅಂತ ಹೇಳುತ್ತಿದ್ದಾರೆ. ಆದ್ದರಿಂದಲೇ ಕೌಜಲಗಿಯವರಾಗಲೀ ಗುರುಪಾದಪ್ಪನವರಾಗಲೀ ಸಿಟ್ಟಿನಿಂದ ಹೇಳಿರುವುದು. ನಾನು ಒಂದು ಸಲಹೆ ಸರ್ಕಾರಕ್ಕೆ ಕೊಡತಕ್ಕಂಥದ್ದು, ನಿಮ್ಮ ಹತ್ತಿರ ಏನು ಹಣವಿದೆ ಆ ಹಣವನ್ನು ಈ ಕಾರ್ಯಕ್ರಮಗಳಿಗೆ ಕೊಡುವುದನ್ನುನಿಲ್ಲಿಸಿ ಆಟದ ಮೈದಾನಗಳಿಗೋ, ಶಾಲಾ ಕಟ್ಟಡ ಕಟ್ಟಿಸಲಿಕ್ಕೋ ಅಥವಾ ಅಧ್ಯಾಪಕರುಗಳನ್ನು ನೇಮಕ ಮಾಡಿಕೊಳ್ಳಲಿಕ್ಕೋ ಉಪಯೋಗಿಸಲು ಸಾಧ್ಯನಾ ಅಂತ ದಯವಿಟ್ಟು ಉತ್ತರ ಕೊಡಬೇಕು.

ಶ್ರೀಮತಿ ನಾಗಮ್ಮ ಸಿ.ಕೇಶವಮೂರ್ತಿ :- ಮಾನ್ಯ ಅಧ್ಯಕ್ಷರೇ, ಈ ಅಕ್ಷಯ ಕಾರ್ಯಕ್ರಮ ಬಹಳ ಒಳ್ಳೆಯ ಕಾರ್ಯಕ್ರಮ. ಇದನ್ನು ನಮ್ಮ ಸರ್ಕಾರ ಪ್ರಾರಂಭ ಮಾಡಿದೆ. ಇದರ ಬಗ್ಗೆ ಆಸಕ್ತಿ ಇಲ್ಲ ಎಂದು ಹೇಳುವುದು ಸರಿಯಲ್ಲ. ಹಣವನ್ನು ಬಿಡುಗಡೆ ಮಾಡಿ ಆದಷ್ಟು ನಮ್ಮ ಈ ಒಂದು ಇಲಾಖೆಯಿಂದ ಖರ್ಚು ಮಾಡಿದ್ದೇವೆ. ಈ ವರ್ಷದಲ್ಲಿ ಆರು ಕೋಟಿ ಖರ್ಚು ಆಗಿದೆ; ಇನ್ನುಳಿದ ಹಣವನ್ನು ಪುನರ್ ರೂಪಿಸಲಾದ ಈ ಕಾರ್ಯಕ್ರಮಕ್ಕೆ ಆದಷ್ಟು ಹೆಚ್ಚು ಹಣವನ್ನು ನಾವು ಈ ವರ್ಷ ಖರ್ಚು ಮಾಡುತ್ತಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಸನ್ಮಾನ್ಯ ಅಧ್ಯಕ್ಷರೇ, ಈ ಅಕ್ಷಯ ಯೋಜನೆ ಜಾರಿ ಆದಾಗ ಬಜೆಟ್‌ನಲ್ಲಿ ಇಟ್ಟಿದ್ದ ಹಣವನ್ನು ಖರ್ಚುಮಾಡಬೇಕಾದ್ದು ಸರ್ಕಾರದ ಆದ್ಯಕರ್ತವ್ಯವಾಗಿತ್ತು. ಈಗ ಬದಲಾವಣೆ ಮಾಡಿಕೊಂಡು ನೀವು ಬೇಕಾದ್ದು ಮಾಡಿ. ಅಕ್ಷಯ ಯೋಜನೆ ಪ್ರಾರಂಭವಾಗುತ್ತಿದ್ದಂತೆಯೇ ಈ ಯೋಜನೆಗೆ ಒಂದುರೀತಿ ಬಾಲಗ್ರಹ ಮೂಡಿತು. ಅದಕ್ಕೆ ನಾನು ನಿಮ್ಮಲ್ಲಿ ಕೇಳುತ್ತಿದ್ದೇನೆ, ಫೆಬ್ರವರಿ 92ರಲ್ಲಿ ಇದೇ ಸದನದಲ್ಲಿ ಪ್ರಶ್ನೆಯನ್ನು ಕೇಳಿದ್ದಕ್ಕೆ ಉತ್ತರವನ್ನು ಕೊಟ್ಟಿರಿ. 1992-93ನೇ ಸಾಲಿಗೆ ಬಾಕಿ ಇದ್ದ ಸುಮಾರು 30 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಿದ್ದೇವೆಂದು. ಮಾರ್ಚ್ 31ರ ಒಳಗಡೆ ಎಲ್ಲ ಹಣವನ್ನು ಬಿಡುಗಡೆಮಾಡಿ ಹಂಚುತ್ತೇವೆಂದು ಹೇಳಿದಿರಿ. ಆದರೆ ಈ ನಿಮಿಷದವರೆವಿಗೂ ಈ ಸದನದಲ್ಲಿ ಕೊಟ್ಟಂಥ ಪ್ರಾಮಿಸ್‌ನ್ನು ತಾವು ಕೀಪ್‌ಅಪ್ ಮಾಡಲಿಲ್ಲ. ಅದಕ್ಕೆ ನಾನು ನಿಮ್ಮನ್ನು ಕೇಳುತ್ತೇನೆ, ಈ ಸದನದಲ್ಲಿ ಸಚಿವರು ಕೊಟ್ಟಂಥ ಉತ್ತರ ಏನಿದೆ, ಆದರಂತೆ 30 ಕೋಟಿ ರೂಪಾಯಿಗಳನ್ನು 1992-93ರಲ್ಲಿ ಬಾಕಿ ಇರುವುದನ್ನು ಬಿಡುಗಡೆ ಮಾಡಿ ಹಂಚಿದ್ದೀರಾ ಅಂತ ನೇರವಾದ ಉತ್ತರವನ್ನು ತಮ್ಮಿಂದ ನಿರೀಕ್ಷಣೆ ಮಾಡುತ್ತಿದ್ದೇನೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಅಂಕಿಅಂಶಗಳನ್ನು ತಮ್ಮ ಮುಂದಿಟ್ಟಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರನ್ನು ನೇರವಾಗಿ ಕೇಳುತ್ತಿದ್ದೇನೆ; ದುಡ್ಡಿದಿಯೇ ಅಥವಾ ಇಲ್ಲವೇ ಎನ್ನುವುದನ್ನು ಹೇಳಲಿ?

ಅಧ್ಯಕ್ಷರು :- ಅವರು ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್ :- ತಮ್ಮ ಹತ್ತಿರ ದುಡ್ಡಿದೆಯೇ ಅಥವಾ ಇಲ್ಲವೇ ಎನ್ನುವುದನ್ನು ಹೇಳಿಬಿಟ್ಟರೆ ಸಾಕು.

ಶ್ರೀ ಬಿ.ಎಸ್. ಯಡಿಯೂರಪ್ಪ :- ಮಾನ್ಯ ಮಂತ್ರಿಗಳು ಕ್ಷಮಿಸಬೇಕು. ಇದು ನನ್ನ ಪ್ರಶ್ನೆಯಲ್ಲ, ಮಾನ್ಯ ಅಧ್ಯಕ್ಷರು ನಮ್ಮ ಸಹಾಯಕ್ಕೆ ಬರಬೇಕು.

ಅಧ್ಯಕ್ಷರು :- ನಿಮ್ಮ ಸಹಾಯಕ್ಕೆ ಬರುತ್ತೇನೆ. ಇದನ್ನು ನಾನು ಅರ್ಧಗಂಟೆ ಕಾಲದ ಚರ್ಚೆಗೆ ನಾಳೆ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ನಾನು ಕೇಳುವುದೇನೆಂದರೆ, ಮಾನ್ಯ ಸಚಿವರು 30 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿದ್ದರು. ಅದನ್ನು ಯಾವಾಗ ಬಿಡುಗಡೆ ಮಾಡುತ್ತಾರೆಂದು ಕೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :- ಜಾರಿಗೆ ಬರುವುದು ಯಾವಾಗ?

ಶ್ರೀ ಹೆಚ್.ಎಕಾಂತಯ್ಯ :- ಮಾನ್ಯ ಅಧ್ಯಕ್ಷರೇ, ಇಲ್ಲಿ ಕೊಟ್ಟಿರುವ ಅನುಬಂಧವನ್ನು ತಮ್ಮ ಗಮನಕ್ಕೆ ತರುತ್ತಾ, ಮಾನ್ಯ ಮಂತ್ರಿಗಳು ಈ ಮನೆಯಲ್ಲಿ ಏನು ಹೇಳಿದ್ದಾರೆ, ಅದಕ್ಕೆ ವಿರುದ್ಧವಾಗಿರುವುದನ್ನು ಈ ಅನುಬಂಧದಲ್ಲಿ ಕೊಟ್ಟಿದ್ದಾರೆ. ಈ ಅಕ್ಷಯ ಯೋಜನೆಯು ಬಹಳ ಒಳ್ಳೆಯ ಯೋಜನೆ ಎಂದು ನಮ್ಮ ಸರ್ಕಾರದವರು ಭಾವಿಸಿದ್ದಾರೆನ್ನುವ ಮಾತನ್ನು ಹೇಳಿದರು. ಅನುಬಂಧದಲ್ಲಿ ಯಾರು ವಿಶೇಷ ಅಧಿಕಾರವನ್ನು ಪಡೆದಿದ್ದಾರೆ ಅವರನ್ನೇ ಸರ್ಕಾರ ಕಾರ್ಯದರ್ಶಿಗಳನ್ನಾಗಿಯೂ ಮಾಡಿದ್ದಾರೆ. ಇದು ಮೊದಲನೆಯದಾಗಿ ಸರಿಯಿಲ್ಲ. ಎರಡನೆಯದಾಗಿ ಇದರಲ್ಲಿರುವ ಪದಗಳನ್ನು ತಮಗೆ ಹೇಳುತ್ತೇನೆ, "ಹಾಲಿ ಜಾರಿಯಲ್ಲಿರುವ ಅಕ್ಷಯ ಕಾರ್ಯಕ್ರಮ

ನಿರೀಕ್ಷಿಸಿದ ಮಟ್ಟಕ್ಕೆ ಆದರಿಂದ ಪ್ರಯೋಜನ ಲಭಿಸಲಿಲ್ಲವೆಂದು ಭಾವಿಸಿ", ಸ್ವಾಮಿ ಇಂಥ ಹೇಳಿಕೆಗಳು ಸರ್ಕಾರದಿಂದ ಬರಬೇಕು. ಆದರೆ ಆದಕ್ಕೆ ತದ್ವಿರುದ್ಧವಾದ ಉತ್ತರಗಳನ್ನು ಇಲ್ಲಿ ಕೊಟ್ಟಿದ್ದಾರೆ. ಉತ್ತರದಲ್ಲಿ ಕೊಟ್ಟಿರುವುದು ಒಂದಾದರೆ ಇಲ್ಲಿ ನಮಗೆ ಕೊಟ್ಟಿರುವುದೇ ಬೇರೆಯಾಗಿ ಆದಕ್ಕೆ ತದ್ವಿರುದ್ಧವಾದ ಉತ್ತರಗಳನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಪರಾಂಬರಿಸಬೇಕೆಂದು ಮತ್ತು ಸರಿಯಾದ ಉತ್ತರಗಳನ್ನು ಕೊಡಲು ತಾವು ಆವರಿಗೆ ಆದೇಶವನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ವಿಷಯ : - ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಎಂಡೋಸ್ಕೋಪ್ ಉಪಕರಣಗಳನ್ನು ಸರಬರಾಜು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 102(611)

ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು)

ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಕ್ಟೋರಿಯಾ ಆಸ್ಪತ್ರೆಯಲ್ಲಿರುವ ಬಹಳಷ್ಟು ಎಂಡೋಸ್ಕೋಪ್‌ಗಳು ಕೆಟ್ಟು ಹೋಗಿದ್ದು, ದುರಸ್ತಿ ಮಾಡಲು ಸಾಧ್ಯವಿಲ್ಲದ ಪರಿಸ್ಥಿತಿಯಲ್ಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹೊಸ ಎಂಡೋಸ್ಕೋಪ್‌ಗಳನ್ನು ಸರಬರಾಜು ಮಾಡದೇ ಇರುವುದರಿಂದ ರೂ. 25.00ಲಕ್ಷದ ವೆಚ್ಚದ ವಿಡಿಯೋ ಎಂಡೋಸ್ಕೋಪಿ ಯೋಜನೆಯಲ್ಲಿ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬೆಂಗಳೂರಿನಲ್ಲಿ ಜನಸಂಖ್ಯೆಯು 55 ಲಕ್ಷಕ್ಕೂ ಮೀರಿದ್ದು, ಕೆಲವು ಎಂಡೋಸ್ಕೋಪಿ ತಪಾಸಣೆಗಾಗಿ ಹೆಚ್ಚು ಹೆಚ್ಚು ರೋಗಿಗಳನ್ನು ಖಾಸಗಿ ಆಸ್ಪತ್ರೆಗಳಿಗೆ ಕಳುಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಸರ್ಕಾರವು ಎಲ್ಲರಿಗೂ ಒಳ್ಳೆಯ ಆರೋಗ್ಯ ನೀಡುವ ಹಿತದೃಷ್ಟಿಯಿಂದ ರೂ. 5-6 ಲಕ್ಷ ಬೆಲೆಯಾಗುವ ಹೊಸ ಎಂಡೋಸ್ಕೋಪಿಗಳನ್ನು ವಿಕ್ಟೋರಿಯಾ ಆಸ್ಪತ್ರೆಗೆ ಸರಬರಾಜು ಮಾಡಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

ಶ್ರೀ ಜಿ.ರಾಮಕೃಷ್ಣ

(ವೈದ್ಯಕೀಯ ಶಿಕ್ಷಣ ಸಚಿವರು)

ಬಂದಿದೆ, ಇರುವ 4 ಎಂಡೋಸ್ಕೋಪ್‌ಗಳಲ್ಲಿ 2 ದುರಸ್ತಿ ಮಾಡಲಾಗದಷ್ಟು ಕೆಟ್ಟು ಹೋಗಿದೆ. ಆದರೆ ಉಳಿದೆರಡು ಕಾರ್ಯ ನಿರ್ವಹಿಸುತ್ತಿದೆ.

ಬಾಕಿ ಉಳಿದಿರುವ ಸಿವಿಲ್ ಕಾಮಗಾರಿಗಳು ಪೂರ್ಣಗೊಂಡ ನಂತರ ಲಭ್ಯವಿರುವ ಎಂಡೋಸ್ಕೋಪ್‌ಗಳನ್ನು ಉಪಯೋಗಿಸಲಾಗುವುದು.

ಯಾವಾಗಲಾದರೂ ಒಮ್ಮೆ ವಿಶೇಷ ತಪಾಸಣೆಗಾಗಿ ಕೆಲವು ರೋಗಿಗಳನ್ನು ಎಲ್ಲಾ ಸೌಲಭ್ಯವನ್ನು ಒಳಗೊಂಡ ಗ್ಯಾಸ್ಟ್ರೋಎಂಟ್ರಾಲಾಜಿ ವಿಭಾಗವಿರುವ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಗೆ ಕಳುಹಿಸಲಾಗುತ್ತಿದೆ. ಇದಲ್ಲದೆ ಎಂಡೋಸ್ಕೋಪಿ ಸೌಲಭ್ಯವು ಜಯನಗರದ ಜನರಲ್